# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1041(1102)
2. ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 21.08.2025.
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ, ಜಮಖಂಡಿ ಹಾಗೂ ಮುಧೋಳದ ಮತ್ತು ಇನ್ನಿತರ ಗ್ರಾಮಗಳ ಭೂಪ್ರದೇಶಕ್ಕೆ ನೀರು ಒದಗಿಸುವ ನಿಟ್ಟಿನಲ್ಲಿ 2018 ನೇ ಸಾಲಿನಲ್ಲಿ ವೆಂಕಟೇಶ್ವರ ಏತ ನೀರಾವರಿ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ವೆಂಕಟೇಶ್ವರ ಏತ ನೀರಾವರಿ ಯೋಜನೆಗೆ ದಿನಾಂಕ: 12.02.2015 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ;<br>• **ಹೆಡ್‌ವರ್ಕ ಕಾಮಗಾರಿ**: ಹೆಡ್‌ವರ್ಕ ಕಾಮಗಾರಿಯು ಪೂರ್ಣಗೊಂಡಿದ್ದು, ಜನವರಿ-2024 ರಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿರುತ್ತದೆ.<br>• **ಮುಖ್ಯ ಕಾಲುವೆ:** ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.<br>• **ನಾವಲಗಿ ಉಪಕಾಲುವೆ:** ಕಾಮಗಾರಿಯು 90% ಪೂರ್ಣಗೊಂಡಿದ್ದು ಒಟ್ಟು 14.52 ಕಿಮೀ ಕಾಮಗಾರಿಯ ಪೈಕಿ 13.26ಕಿಮೀ ನಿರ್ವಹಿಸಲಾಗಿದ್ದು, ಬಾಕಿ ಉಳಿದ 1.26ಕಿಮೀ ಕಾಮಗಾರಿಯನ್ನು ನಿರ್ವಹಿಸಬೇಕಿರುತ್ತದೆ.<br>• **ಸಿದ್ದಾಪೂರ ಉಪ ಕಾಲುವೆ:** ಒಟ್ಟು 18.89ಕಿಮೀ ಕಾಮಗಾರಿಯ ಪೈಕಿ 13.89ಕಿಮೀ ನಿರ್ವಹಿಸಲಾಗಿದ್ದು, ಕಾಮಗಾರಿ ಸ್ಥಳದಲ್ಲಿ ರೈತರು ಬೆಳೆ ಬೆಳೆದಿರುವದರಿಂದ ಹಾಗೂ ಮಳೆಗಾಲದಿಂದ ಅಡೆತಡೆ ಉಂಟಾಗಿದ್ದು, ಬಾಕಿ ಉಳಿದ ಕಾಮಗಾರಿಯನ್ನು ಡಿಸೆಂಬರ್-2025 ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.<br>• **ವಿತರಣಾ ಕಾಲುವೆ:** ಕಾಮಗಾರಿಗಳು ಭಾಗಶಃ ಪೂರ್ಣಗೊಂಡಿದ್ದು, ಬಾಕಿ ಉಳಿದ ಕಾಮಗಾರಿಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.<br>• **ಹೊಲಗಾಲುವೆ:** ಕಾಮಗಾರಿಗಳನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು. |

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಸದರಿ ಯೋಜನೆಯನ್ನು ಪ್ರಾರಂಭಿಸಿ 7-8 ವರ್ಷಗಳು ಕಳೆದರೂ ಇನ್ನೂ ಹಲವಾರು ಗ್ರಾಮಗಳ ವ್ಯಾಪ್ತಿಗೆ ಬರುವ ಕಾಲುವೆಗಳಿಗೆ ನೀರು ಹರಿಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಕಾರಣಗಳೇನು; (ಸಂಪೂರ್ಣವಾಗಿ ವಿವರಿಸುವುದು)</td><td>ಮುಖ್ಯ ಕಾಲುವೆ, ನಾವಲಗಿ ಮತ್ತು ಸಿದ್ದಾಪೂರ ಉಪಕಾಲುವೆ ಹಾಗೂ ಭಾಗಶಃ ವಿತರಣಾ ಕಾಲುವೆಗಳಲ್ಲಿ 2024 ಮುಂಗಾರು ಮತ್ತು 2025 ಮುಂಗಾರು ಹಂಗಾಮಿನಲ್ಲಿ ಕಾಲುವೆಗಳಲ್ಲಿ ನೀರನ್ನು ಹರಿಸಲಾಗಿದ್ದು, ಬಾಕಿ ಉಳಿದ ವಿತರಣಾ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿ ಇರುವುದರಿಂದ ಪೂರ್ಣಪ್ರಮಾಣದಲ್ಲಿ ನೀರನ್ನು ಹರಿಸಲು ಸಾಧ್ಯವಾಗಿರುವುದಿಲ್ಲ. ಕಾಮಗಾರಿಗಳು ಪೂರ್ಣಗೊಂಡ ನಂತರ ಸಂಪೂರ್ಣವಾಗಿ ನೀರನ್ನು ಹರಿಸಿ ಎಲ್ಲಾ ಗ್ರಾಮಗಳ ರೈತರಿಗೆ ತಲುಪಿಸಲು ಕ್ರಮ ಜರುಗಿಸಲಾಗುವುದು.</td></tr>
<tr><td>ಇ)</td><td>ಸದರಿ ಯೋಜನೆಯ ಕಾಲುವೆ ನಿರ್ಮಾಣಕ್ಕೆ ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರಿಹಾರ ನೀಡಲಾಗಿದೆಯೆ; ನೀಡಿದ್ದಲ್ಲಿ, ಎಷ್ಟು ರೈತರಿಗೆ ಎಷ್ಟು ಪರಿಹಾರ ನೀಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ವೆಂಕಟೇಶ್ವರ ಏತ ನೀರಾವರಿ ಯೋಜನೆಯಡಿ ಬರುವ ಜಮೀನು ಕಳೆದುಕೊಂಡ ರೈತರಿಗೆ ವಿತರಿಸಿದ ಪರಿಹಾರ ಧನದ ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ;
<table>
<tr><th>ತಾಲ್ಲೂಕು</th><th>ಗ್ರಾಮ</th><th>ರೈತರ ಸಂಖ್ಯೆ</th><th>ಪರಿಹಾರ (ರೂ. ಕೋಟಿಗಳಲ್ಲಿ)</th></tr>
<tr><td rowspan="2">ರಬಕವಿ-ಬನಹಟ್ಟಿ</td><td>ಕುಲಹಳ್ಳಿ (ಜಾಕ್‌ವೆಲ್ & ಪಂಪ ಹೌಸ್)</td><td>07</td><td>0.60</td></tr>
<tr><td>ಕುಲಹಳ್ಳಿ (ರೈಸಿಂಗ್ ಮೇನ್)</td><td>52</td><td>10.03</td></tr>
<tr><td rowspan="2">ಜಮಖಂಡಿ</td><td>ಕಲಹಳ್ಳಿ</td><td>63</td><td>07.88</td></tr>
<tr><td>ಬುದ್ನಿ</td><td>07</td><td>0.67</td></tr>
<tr><td></td><td>ಒಟ್ಟು</td><td>129</td><td>19.18</td></tr>
</table></td></tr>
<tr><td>ಈ)</td><td>ಸದರಿ ಯೋಜನೆಯು ಪೂರ್ಣಗೊಳ್ಳದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು)</td><td>ಉಪಕಾಲುವೆ ಕಾಮಗಾರಿಯನ್ನು ಡಿಸೆಂಬರ್-2025ರ ಅಂತ್ಯದೊಳಗೆ, ವಿತರಣಾ ಕಾಲುವೆ ಮತ್ತು ಹೊಲಗಾಲುವೆ ಕಾಮಗಾರಿಗಳನ್ನು ಮಾರ್ಚ-2026ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.</td></tr>
</table>

**ಸಂಖ್ಯೆ: ಜಸಂಇ 62 ಡಬ್ಲ್ಯೂಎಲ್‌ಎ 2025**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**